ಓ ಎಸ್.ನಂ. 21/2017 ಪಿ.ಡಬ್ಲ್ಯೂ -1/ಪುಟ್ಟಸ್ವಾಮಿ

ಸಾಕ್ಷಿಗೆ ದಿನಾಂಕ: 01.12.2022 ರಂದು ಪ್ರಮಾಣ ವಚನ ಮಾಡಿಸಿದೆ:

**ಮುಂದುವರಿದ ಮುಖ್ಯ ವಿಚಾರಣೆ:- ವಾದಿ ಪರ ಶ್ರೀ ಎನ್.ಡಿ ವಕೀಲರಿಂದ**

ದಿನಾಂಕ 05-03-2015 ರ ಒಪ್ಪಂದದ ನೋಂದಾಯಿತ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ 3 ಸಹಿಗಳನ್ನು ಒಟ್ಟಾಗಿ ನಿಪಿ1 ಎ ಎಂದು ಗುರುತಿಸಲಾಯಿತು. ಪ್ರತಿವಾದಿಯ 4 ಸಹಿಗಳನ್ನು ಒಟ್ಟಾಗಿ ನಿಪಿ1 ಬಿ ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಅಬ್ದುಲ್ ಸಮಿ ಹಾಗೂ ಸುರೇಶರವರು ಸಾಕ್ಷಿಯಾಗಿ ತಲಾ 2 ಸಹಿಗಳನ್ನು ಮಾಡಿರುತ್ತಾರೆ. ಅಬ್ದುಲ್ ಸಮಿರವರ 2 ಸಹಿಗಳನ್ನು ಒಟ್ಟಾಗಿ ನಿಪಿ1 ಸಿ ಎಂದು ಗುರುತಿಸಲಾಯಿತು. ಸುರೇಶರವರ 2 ಸಹಿಗಳನ್ನು ಒಟ್ಟಾಗಿ ನಿಪಿ1 ಡಿ ಎಂದು ಗುರುತಿಸಲಾಯಿತು. ಬಿಕ್ಲಂದಾರರ ಹೆಸರು ನನಗೆ ಈಗ ನೆನಪಿಲ್ಲ.

ಪ್ರತಿವಾದಿ ಮಾಡಿಕೊಟ್ಟ ಇನ್ನೊಂದು ಒಪ್ಪಂದದ ಕರಾರು ಪತ್ರವನ್ನು ನಿಪಿ2 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಪ್ರತಿವಾದಿಯ 3 ಸಹಿಗಳನ್ನು ಒಟ್ಟಾಗಿ ನಿಪಿ2 ಬಿ ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ದೇವರಾಜು ಮತ್ತು ಚಿಕ್ಕೇಗೌಡರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಸದರಿರವರ ಸಹಿಗಳನ್ನು ಕ್ರಮವಾಗಿ ನಿಪಿ2 ಸಿ ಮತ್ತು ಡಿ ಎಂದು ಗುರುತಿಸಲಾಯಿತು. ಗುರುದೇವೇಗೌಡರವರು ಸದರಿ ಪತ್ರಕ್ಕೆ ಬಿಕ್ಲಂದಾರರಾಗಿರುತ್ತಾರೆ. ಗುರುದೇವೇಗೌಡರವರ ಸಹಿಯನ್ನು ನಿಪಿ2 ಇ ಎಂದು ಗುರುತಿಸಲಾಯಿತು. ಪ್ರತಿವಾದಿಗೆ ಕಳುಹಿಸಿದ ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ3 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಿಸಿದ ಅಂಚೆ ರಶೀದಿಯನ್ನು ನಿಪಿ4 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ5 ಎಂದು ಗುರುತಿಸಲಾಯಿತು. ನಿಪಿ5 ರಲ್ಲಿರುವ ಪ್ರತಿವಾದಿಯ ಸಹಿಯನ್ನು ನಿಪಿ5 ಎ ಎಂದು ಗುರುತಿಸಲಾಯಿತು. ಪ್ರತಿವಾದಿ ಕಳುಹಿಸಿದ ಉತ್ತರವನ್ನು ನಿಪಿ6 ಎಂದು ಗುರುತಿಸಲಾಯಿತು. 2 ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ7 ಮತ್ತು 8 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:**

ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಶಮೀರ್.ಪಿ.ನಂದ್ಯಾಲ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.